ಜುಲೈ 2001ರ ಅಂತ್ಯಕ್ಕೆ ಪೂರ್ಣಿ ಕಟ್ಟಡವನ್ನು ಹಸ್ತಾಂತರಿಸಲು ಉದ್ದೇಶಿಸಿದೆ. ಆಸ್ಪತ್ರೆ ಕಟ್ಟಡವನ್ನು ವಹಿಸಿಕೊಟ್ಟ ನಂತರ ಹೊಸ ಜಿಲ್ಲಾ ಆಸ್ಪತ್ರೆ ಕಾರ್ಯಾರಂಭಗೊಳ್ಳುವುದು.

ಅ) ಬಾಗಲಕೋಟೆಯಲ್ಲಿ ಹಾಲಿ ಇರುವ ಆಸ್ಪತ್ರೆ ಕಟ್ಟಡವು ಆಲಮಟ್ಟಿ ಜಲಾಶಯದ ಹಿನ್ನಿರಿನಲ್ಲಿ ಮುಳುಗಡೆಯಾಗುವುದರಿಂದ ಹಾಗೂ ಬಾಗಲಕೋಟೆಯು ಈಗ ಹೊಸ ಜಿಲ್ಲಾ ಕೇಂದ್ರವಾಗಿರುವುದರಿಂದಲೂ, ಬಾಗಲಕೋಟೆ ನಗರದಲ್ಲಿ 250 ಹಾಸಿಗೆಗಳ ಹೊಸ ಜಿಲ್ಲಾ ಆಸ್ಪತ್ರೆಯನ್ನು ನಿರ್ಮಿಸುವ ಅಗತ್ಯವಿತ್ತು. ಆದ್ದರಿಂದ ಕಾರ್ಯಾರಂಭಗೊಳ್ಳಲು ಸ್ವಲ್ಪ ನಿಧಾನವಾಗಿದೆ. ಕರ್ನಾಟಕ ಆರೋಗ್ಯ ವ್ಯವಸ್ಥೆಗಳ ಅಭಿವೃದ್ಧಿ ಯೋಜನೆಯಡಿ ವಿಶ್ವಬ್ಯಾಂಕ್ ಅನುಮೋದನೆ ಪಡೆದು ಈಗ ಹೊಸ ಜಿಲ್ಲಾ ಆಸ್ಪತ್ರೆಯನ್ನು ನಿರ್ಮಿಸಲಾಗುತ್ತಿದೆ. ಮೇಲೆ ವಿವರಿಸಿರುವಂತೆ ಆಸ್ಪತ್ರೆ ಕಟ್ಟಡ ಕಾಮಗಾರಿಗಳು ಪೂರ್ಣಗೊಳ್ಳುವ ಹಂತದಲ್ಲಿದೆ. ಆಸ್ಪತ್ರೆ ವಹಿಸಿಕೊಟ್ಟ ನಂತರ ಹೊಸ ಜಿಲ್ಲಾ ಆಸ್ಪತ್ರೆ ಕಾರ್ಯಾರಂಭಗೊಳ್ಳುವುದು.

ಬಾಗಲಕೋಟೆ ಜಿಲ್ಲೆಯಲ್ಲಿ ಉರ್ದು ಪ್ರಾಥಮಿಕ ಶಾಲೆ

2591(2957) ಶ್ರೀ ಪೂಜಾರ್ ಪಿ.ಹೆಚ್. (ಬಾಗಲಕೋಟೆ) :— ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬಾಗಲಕೋಟೆ ಜಿಲ್ಲೆಯಲ್ಲಿ ಈಗ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ ಉರ್ದು ಪ್ರಾಥಮಿಕ ಶಾಲೆಗಳೆಷ್ಟು?

ಆ) ಈ ಎಲ್ಲಾ ಉರ್ದು ಪ್ರಾಥಮಿಕ ಶಾಲೆಗಳಲ್ಲಿ ಕನ್ನಡ ಕಲಿಸುವ ಶಿಕ್ಷಕರನ್ನು ನೇಮಿಸಲಾಗಿದೆಯೇ?

ಇ) ಹಾಗಿಲ್ಲದಿದ್ದರೆ ಕಾರಣಗಳೇನು. ವಿವರಣೆ ಕೊಡುವುದು?

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :—

ಅ) ಬಾಗಲಕೋಟೆ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ ಉರ್ದು ಪ್ರಾಥಮಿಕ ಶಾಲೆಗಳು.

೧) ಸರ್ಕಾರಿ ಕಿರಿಯ ಉರ್ದು ಪ್ರಾಥಮಿಕ ಶಾಲೆಗಳು	೯೬
೨) ಸರ್ಕಾರಿ ಹಿರಿಯ ಉರ್ದು ಪ್ರಾಥಮಿಕ ಶಾಲೆಗಳು	೬೭
ಒಟ್ಟು	೧೬೩

ಅ) ಹೌದು.

ಇ) ಉದ್ಭವಿಸುವುದಿಲ್ಲ.

ಬಾಗಲಕೋಟೆ ತಾಲ್ಲೂಕಿನಲ್ಲಿ ಗ್ರಂಥಾಲಯ ಸೌಲಭ್ಯ

2593(2957) ಶ್ರೀ ಪೂಜಾರ್ ಪಿ.ಹೆಚ್. (ಬಾಗಲಕೋಟೆ) :— ಮಾನ್ಯ ವಯಸ್ಕರ ಶಿಕ್ಷಣ, ಗಂಥಾಲಯ ಹಾಗೂ ಮುದ್ರಣ ಮತ್ತು ಲೇಖನ ಸಾಮಗ್ರಿಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕರ್ನಾಟಕದ ಗ್ರಾಮೀಣ ಪ್ರದೇಶಗಳಲ್ಲಿ ಇರುವ ಗಂಥಾಲಯಗಳೆಷ್ಟು;

ಆ) ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಎಲ್ಲಾ ಹಳ್ಳಿಗಳೂ ಸೇರಿ ಒಂದೇ ಗ್ರಂಥಾಲಯ ಅವಕಾಶವಿದೆ ಎನ್ನವ ಸುತ್ತೋಲೆ ಏನಾದರೂ ಸರ್ಕಾರ ಹೊರಡಿಸಿದೆಯೆ;

ಇ) ಹಾಗಿಲದಿದ್ದಲ್ಲಿ ಬಾಗಲಕೋಟೆ ತಾಲ್ಲೂಕಿನ ಬಿಲ್ಕೆರೂರ ಗ್ರಾಮಕ್ಕೆ ಕಳೆದ ವರ್ಷ ಅವಶ್ಯಕವೆಂದು ಪರಿಗಣಿಸಲಾಗಿದ್ದ ಗ್ರಂಥಾಲಯದ ರದ್ದತಿ ಮಾಡಿದ್ದೇಕೆ; (ವಿವರಿಸುವುದು)

ಈ) ಕರ್ನಾಟಕದಲ್ಲಿ ಗ್ರಾಮ ಪಂಚಾಯಿತಿಗೊಂದರಂತೆ ಎಷ್ಟು ಗ್ರಂಥಾಲಯ ಸೌಲಭ್ಯ ಕಲ್ಪಿಸಲಾಗಿದೆ; ಇನ್ನು ಎಷ್ಟು ಗ್ರಾಮ ಪಂಚಾಯಿತಿಗಳಿಗೆ ಈ ಕೊರತೆ ಉಳಿದುಕೊಂಡಿದೆ; ತಾಲ್ಲೂಕುವಾರು ಮಾಹಿತಿ ನೀಡುವುದು;

ಉ) ಪ್ರಸಕ್ತ ವರ್ಷ ಬಾಗಲಕೋಟೆ ತಾಲ್ಲೂಕಿಗೆ ಎಷ್ಟು ಗ್ರಂಥಾಲಯ ಸೌಲಭ್ಯ ಒದಗಿಸುವ ಯೋಜನೆ ಸರ್ಕಾರಕ್ಕೆ ಇದೆ?

ಶ್ರೀ ಬಾಬುರಾವ್ ಚವ್ವಾಣ್ (ವಯಸ್ಕರ ಶಿಕ್ಷಣ, ಗಂಥಾಲಯ ಹಾಗೂ ಮುದ್ರಣ ಮತ್ತು ಲೇಖನ ಸಾಮಗ್ರಿಗಳ ರಾಜ್ಯ ಸಚಿವರು) :—

ಅ) ೨೭೫೧

ಆ) ಹೌದು

ಇ) ರದ್ದುಮಾಡಿಲ್ಲ

ಈ) ೨೭೫೧ ಗ್ರಾಮ ಪಂಚಾಯಿತಿಗಳಿಗೆ ಗ್ರಂಥಾಲಯ ಸೌಲಭ್ಯ ಒದಗಿಸಿದೆ. ೨೯೦೮ ಗ್ರಾಮ ಪಂಚಾಯಿತಿಗಳಿಗೆ ಗ್ರಂಥಾಲಯ ಸೌಲಭ್ಯ ಬೇಕಾಗಿದೆ. ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಉ) ಹಣಕಾಸಿನ ಪರಿಮಿತಿಯಲ್ಲಿ ಗ್ರಂಥಾಲಯಗಳ ಸೌಲಭ್ಯ ಒದಗಿಸಲಾಗುವುದು.